# <u>IV ನೇ ಹೆಚ್ಚುವರಿ ನ್ಯಾಯಾಲಯ ಹಾಗೂ ಜೆ ಎಮ್ ಎಫ್ ಸಿ, ಬೆಳಗಾವಿ</u>

**OS.No.103/2018**

**PW-1**

<u>**ಪ್ರಮಾಣ ವಚನ ಬೋಧಿಸಿದ ದಿನಾಂಕಃ 07-07-2023.**</u>

ಪಾಟೀ ಸವಾಲು ಪ್ರತಿವಾದಿಪರ ವಕೀಲರು ಶ್ರೀಃ GGP ರವರಿಂದ.

ದಾವಾಸ್ವತ್ತಿನ ನಂ.286 ಹಾಗೂ ಅದರ ವಿಸ್ತೀರ್ಣ 30 X 40 ಇದೆ ಎಂದು ತೋರಿಸಲು ದಾಖಲೆ ಹಾಜರು ಪಡಿಸಿರುವುದಿಲ್ಲ ಎಂದರೆ ಸಾಕ್ಷಿ ಹಾಜರು ಪಡಿಸಿರುತ್ತೇನೆ ಎನ್ನುತ್ತಾರೆ. ನೀವು ಕ್ರಯಪತ್ರವನ್ನು ವರತು ಪಡಿಸಿ ಲೇಔಟ್‌ಗೆ ಸಂಬಂಧಸಿದಂತೆ ನಕ್ಷೆ ಹಾಜರು ಪಡಿಸಿರುವುದಿಲ್ಲ ಎಂದರೆ ಸಾಕ್ಷಿ ಹಾಜರು ಪಡಿಸಿರುತ್ತೇನೆ ಎನ್ನುತ್ತಾರೆ. ಸಾಕ್ಷಿ ತಾನು ಹಾಜರು ಪಡಿಸಿರುವ ದಾಖಲೆಗಳನ್ನು ನೋಡಿ ನಕ್ಷೆ ಹಾಜರು ಪಡಿಸಿರುವುದಿಲ್ಲ ಎನ್ನುತ್ತಾರೆ. ದಾವಾ ಸರ್ವೇ ನಂಬರಿಗೆ ಬೂಡದವರು ಲೇಔಟ್ ಅಪ್ರೂ ಮಾಡಿರುವುದಿಲ್ಲ ಎಂದರೆ ಸಾಕ್ಷಿ ಏನು ಏನು ಇದೆಯೋ ಕಾಗದ ಹಾಜರು ಪಡಿಸಿರುತ್ತೇವೆ ಎನ್ನುತ್ತಾರೆ. ಪ್ರತಿವಾದಿ 1 ರಿಂದ 6 ರವರು RS No.89/1A/1 ರ ವಿಸ್ತೀರ್ಣ 5 ಎಕರೆ 22 ಗುಂಟೆಯ ಮಾಲೀಕರು ಎಂದರೆ ಸರಿ. ಸದರಿ ಸರ್ವೇ ನಂಬರು ಇಲ್ಲಿಯವರೆಗೂ ವ್ಯವಸಾಯದ ಜಮೀನು ಆಗಿರುತ್ತದೆ ಎಂದರೆ ಸಾಕ್ಷಿ NA copy ಕೊಟ್ಟಿರುತ್ತೇವೆ ಎನ್ನುತ್ತಾರೆ. ನೀವು ಸದರಿ ಸರ್ವೇ ನಂಬರಿಗೆ ಸಂಬಂಧಿಸಿದಂತೆ NA ದಾಖಲೆ ಹಾಜರು ಪಡಿಸದೆ ಇದ್ದರು NA ಆಗಿದೆ ಎಂದು ಸುಳ್ಳು ಹೇಳುತಿದ್ದೀರಿ ಎಂದರೆ ಸರಿಯಲ್ಲ. ಪ್ರತಿವಾದಿ 1 ರಿಂದ 6 ರವರು ಸದರಿ ಸರ್ವೇ ನಂಬರಿನಲ್ಲಿ ಇಂದಿಗೂ ಕೂಡ ಉಳುಮೆ ಮಾಡುತ್ತಾರೆ ಎಂದರೆ ಸರಿಯಲ್ಲ. ಆಹಮದ್ ಯಾಕೂಬ್ ನಾಯಕವಾಡಿರವರು 2009 ರಲ್ಲೇ ತೀರಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಪ್ರತಿವಾದಿ 1 ರಿಂದ 6 ರವರು RS No.89/1A/1 ರ ವಿಸ್ತೀರ್ಣ 5 ಎಕರೆ 22 ಗುಂಟೆಯ ಸಂಬಂಧಿಸಿದಂತೆ 7 ನೇ ಪ್ರತಿವಾದಿಗೆ ಜಿ.ಪಿ.ಎ ನೀಡಿರುವುದಿಲ್ಲ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. RS No.89/1A/2 ವಿಸ್ತೀರ್ಣ 5 ಎಕರೆ ಅಗಲಾವಿರವರ ಸ್ವತ್ತು ಎಂದರೆ ಸರಿ.

2. 7 ನೇ ಪ್ರತಿವಾದಿಗೆ ಕ್ರಯಪತ್ರ ಬರೆದುಕೊಡಲು ಯಾವುದೇ ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. 7 ನೇ ಪ್ರತಿವಾದಿಗೆ ಯಾವುದೇ ಅಧಿಕಾರ ಪತ್ರಮಾಡಿಕೊಡಲು ಅಧಿಕಾರ ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. 7 ನೇ ಪ್ರತಿವಾದಿ 2008-09 ರಲ್ಲಿ ರೆವಿನ್ಯೂ ಅಧಿಕಾರಿಗಳೊಂದಿಗೆ ಶಾಮೀಲಾಗಿ RS.No.89/1A/1 ನ್ನು RS No.89/1A/2 ಎಂದು ಬದಲಾಯಿಸಿ ಕೊಟ್ಟಿ ದಾಖಲೆ ಸೃಷ್ಟಿ ಮಾಡಿ ನಿಮಗೆ ಮತ್ತು ಬೇರೆಯವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಕ್ರಯಪತ್ರ ಕಾನೂನು ಬಾಹಿರವಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸಬ್ ರಿಜಿಸ್ಟರ್ ಕಛೇರಿಯಲ್ಲಿ ನೊಂದಾವಣೆಯಾಗಿರುತ್ತದೆ ಎನ್ನುತ್ತಾರೆ. RS No.89/1A/1 ರ ROR ರಲ್ಲಿ

ಇಂದಿಗೂ ಸಹ ಕೃಷಿ ಜಮೀನು ಎಂದು ತೋರಿಸುತ್ತಿದ್ದೆ ಎಂದರೆ ಸಾಕ್ಷಿ ಗೊತ್ತಿಲ್ಲ ನಾವು ಕಂದಾಯ ಪಾವತಿಸುತ್ತಿದ್ದೇವೆ ಎನ್ನುತ್ತಾರೆ. ROR ನಲ್ಲಿ ನಿಮ್ಮ ಹೆಸರು ಮಾಲೀಕರು ಎಂದು ಇನ್ನೂ ನಮೂದಿರುವುದಿಲ್ಲ ಎಂದರೆ ಸಾಕ್ಷಿ ಹತ್ತಿರುವುದಿಲ್ಲ ಆದ ಕಾರಣ ದಾವೆ ಹೂಡಿರುತ್ತೇವೆ ಎನ್ನುತ್ತಾರೆ. ಸದರಿ ಸರ್ವೆ ನಂಬರು ವ್ಯವಸಾಯದ ಜಮೀನು ಆದ ಕಾರಣ ನಿಮ್ಮ ಹೆಸರು ನಮೂದು ಇರುವುದಿಲ್ಲ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ನಿಪಿ.1 ಕ್ರಯಪತ್ರದಲ್ಲಿ ನಮೂದು ಮಾಡಿದ NA ನಂಬರು ಪ್ರತಿವಾದಿ ನಂ.1 ರಿಂದ 6 ರವರ ಸ್ವತ್ತಿಗೆ ಸಂಬಂಧಿಸಿದ್ದಲ್ಲ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಪ್ರತಿವಾದಿ 1 ರಿಂದ 6 ರವರ ಜಮೀನು NA ಅಗಿರುವುದಿಲ್ಲ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ದಾವಾಸ್ವತ್ತು ಕೃಷಿ ಜಮೀನು ಇರುವ ಕಾರಣ ಕಾರ್ಪೋರೇಶನ್‌ರವರು ಕಂದಾಯ ಪಡೆದುಕೊಳ್ಳಲು ಅಧಿಕಾರ ಇರುವುದಿಲ್ಲ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ನಿಪಿ.2 ರಿಂದ 6 ದಾಖಲೆಗಳು ಕೊಟ್ಟಿ ದಾಖಲೆಗಳು ಎಂದರೆ ಸರಿಯಲ್ಲ. ದಾವಾಸ್ವತ್ತಿನಲ್ಲಿ ನೀವು ಸ್ವಾಧೀನದಲ್ಲಿರುವುದಲ್ಲ ಎಂದರೆ ಸರಿಯಲ್ಲ. 7 ನೇ ಪ್ರತಿವಾದಿ ನಿಮಗೆ ದಾವಾ ಸರ್ವೆ ನಂಬರಿನ ಸ್ವತ್ತನ್ನು ಮಾರಾಟ ಮಾಡಲು ಹಾಗೂ ಸ್ವಾಧೀನ ನೀಡಲು ಅಧಿಕಾರ ಇರುವುದಿಲ್ಲ ಆದ್ದರಿಂದ ಸ್ವಾಧೀನ ನೀಡಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಸ್ವಾಧೀನ ನೀಡಿರುತ್ತಾರೆ ಎನ್ನುತ್ತಾರೆ. 7 ನೇ ಪ್ರತಿವಾದಿ ಹಾಗೂ ನೀವು ಸೇರಿಕೊಂಡು ಪ್ರತಿವಾದಿ 1 ರಿಂದ 6 ರವರ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಸುಳ್ಳ ದಾವೆಯನ್ನು ಹೂಡಿ ಕೊಟ್ಟಿ ದಾಖಲೆಯನ್ನು ಸೃಷ್ಟಿ ಮಾಡಿ ಸುಳ್ಳು ಸಾಕ್ಷಿ ನುಡಿಯುತಿದ್ದೀರಿ ಎಂದರೆ ಸರಿಯಲ್ಲ. ವಾದಿ ಎಂದಿಗೂ ದಾವಾಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇರದೇ ಇದ್ದರು ದಾವಾಸ್ವತ್ತಿನ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ.
ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)**

ಓ.ಹೇ.ಕೇ. ಸರಿಯಿದೆ.

ಸಹಿ/-

4 ನೇ ಹೆಚ್ಚುವರಿ ಸಿವಿಲ್ ನ್ಯಾ . ಹಾಗೂ

ಜೆ ಎಮ್ ಎಫ್ ಸಿ, ಬೆಳಗಾವಿ.